**ದಿನಾಂಕಃ 15-04-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಆರೋಪಿ ಪರ Sri.MCS ವಕೀಲರಿಂದಃ**

2013-14 ನೇ ಇಸ್ವಿಯಲ್ಲಿ ನನಗೆ ವರ್ಷಕ್ಕೆ ಸುಮಾರು 20 ಲಕ್ಷ ಆದಾಯ ಇತ್ತು. ಆ ಸಮಯದಲ್ಲಿ ನಾನು IT returns file ಮಾಡುತ್ತಿರಲಿಲ್ಲ. ಇದುವರೆಗೂ ನಾನು ಯಾವುದೇ IT returns file ಮಾಡಿಲ್ಲ, ಕಾರಣ ನಾನು ಒಬ್ಬ ರೈತನಾಗಿದ್ದೇನೆ. 2013-14 ನೇ ಇಸ್ವಿಯಲ್ಲಿ ನನಗೆ ವಾರ್ಷಿಕ 20 ಲಕ್ಷ ರೂ. ಆದಾಯ ಇರಲಿಲ್ಲ, ಅಷ್ಟು ಆದಾಯ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ಯಾವುದೇ ಬಡ್ಡಿ ವ್ಯವಹಾರ ಮಾಡುವುದಿಲ್ಲ. ಸಾಮಾನ್ಯವಾಗಿ ಯಾರಿಗಾದರೂ ಹಣ ನೀಡಿದ್ದರೆ ಇಂತಿಷ್ಟು ಬಡ್ಡಿ ಎಂದು ವಿಧಿಸಲಾಗುತ್ತದೆ ಎಂದರೆ ಇರಬಹುದು ನಾನು ನೀಡಿದ ಹಣಕ್ಕೆ ಯಾವುದೇ ಬಡ್ಡಿ ವಿಧಿಸಿರುವುದಿಲ್ಲ. ನಾನು ಯಾರಿಗಾದರೂ ಹಣ ಸಾಲವಾಗಿ ನೀಡಿದರೆ ಅದಕ್ಕೆ ಯಾವುದೇ ಬಡ್ಡಿ ತೆಗೆದುಕೊಳ್ಳುವುದಿಲ್ಲ. ಪ್ರಸ್ತುತ ಪ್ರಕರಣದ ಆರೋಪಿ ಈ ಪ್ರಕರಣದಲ್ಲಿ ಹೇಳಿರುವ ವ್ಯವಹಾರದ ಸಂದರ್ಭದಲ್ಲಿ ನನಗೆ ಪರಿಚಯ ಆಗಿದ್ದು, ಆ ಮುಂಚೆ ನನಗೆ ಪರಿಚಯ ಇರಲಿಲ್ಲ ಎಂದರೆ ಸರಿ. ಆರೋಪಿ ನನಗೆ ಹಿಂದಿನಿಂದಲೂ ಪರಿಚಯ ಇಲ್ಲದಿದ್ದರೂ ಸಹ ಪ್ರಕರಣದಲ್ಲಿ ಹೇಳಿರುವ ದೊಡ್ಡ ಮೊತ್ತದ ಹಣವನ್ನು ಯಾವುದೇ ಬಡ್ಡಿ ಪ್ರತಿಫಲಾಪೇಕ್ಷೆ ಇಲ್ಲದೇ ನೀಡಲು ಕಾರಣ ಏನು ಎಂದರೆ ಆರೋಪಿ ಸಿನಿಮಾ ಬಿಡುಗಡೆಗಾಗಿ ತೊಂದರೆ ಇದೆ ಎಂದು ಹೇಳಿದ್ದು, ಹಣ ನೀಡಿರುತ್ತೇನೆ. ನಾನು ಆರೋಪಿಗೆ ಹಣ ನೀಡಿದ್ದೇನೆಂದು ಹೇಳಿದ್ದು ಸದರಿ ಹಣವನ್ನು ನಾನು ಒಬ್ಬ ಹಂಚಿಕೆದಾರನಾಗಿ ನೀಡಿರುವುದಿಲ್ಲ ಬದಲಾಗಿ ಸಿನಿಮಾ ಬಿಡುಗಡೆಗಾಗಿ ತೊಂದರೆ ಇದೆ ಎಂದು ಹೇಳಿದ್ದರಿಂದ ಹಣ ನೀಡಿರುತ್ತೇನೆ. 2014 ರಿಂದ 2019 ರವರೆಗೆ ಸುಮಾರು 5 ವರ್ಷಗಳ ಕಾಲ ಯಾವುದೇ ಬಡ್ಡಿ ಇಲ್ಲದೇ ಆರೋಪಿಗೆ ಹಣ ನೀಡಿದ್ದೀರಾ ಎಂಬ ಪ್ರಶ್ನೆಗೆ ಆ ಸಮಯದಲ್ಲಿ ನಾನು ಆರೋಪಿಗೆ ಹಣ ತಿರುವಳಿ ಮಾಡುವಂತೆ ಕೇಳಿರುತ್ತೇನೆ.

ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಸಾಲದ ವ್ಯವಹಾರ ನಡೆದಿರುವುದಿಲ್ಲ ಕಾರಣ ನಾನು ಆರೋಪಿಗೆ ಬಡ್ಡಿ ಪ್ರಸ್ತಾಪ ಮಾಡಿರುವುದಿಲ್ಲ ಎಂದರೆ ಟಿ ವಿ ರೈಟ್ಸ ನ್ನು ಮೊದಲನೇ ಕಂತಾಗಿ ಹಣ ಬಂದಾಗ ನನ್ನಿಂದ ಪಡೆದ ಹಣವನ್ನು ವಾಪಸ್ ನೀಡುತ್ತೇನೆಂದು ಆರೋಪಿ ನನಗೆ ಹೇಳಿರುತ್ತಾನೆ. ಆರೋಪಿ ಟಿ ವಿ ರೈಟ್ಸ ನಲ್ಲಿ 50 ರಿಂದ 60 ಲಕ್ಷ ಹಣ ಬರುತ್ತದೆ ಅದನ್ನು ವಾಪಸ್ ನೀಡುತ್ತೇನೆಂದು ಹೇಳಿರುತ್ತಾನೆ. ಟಿ ವಿ ರೈಟ್ಸ ಬಗ್ಗೆ ನಮ್ಮ ನಡುವೆ ಆದ ಅಗ್ರಿಮೆಂಟನಲ್ಲಿ ನಮೂದು ಇರುವುದಿಲ್ಲ. ಅಗ್ರಿಮೆಂಟನಲ್ಲಿ ಎಲ್ಲವೂ ನಮೂದಾಗಿದ್ದು, ಸತ್ಯ ಹೊರಗಡೆ ಬರುತ್ತದೆ ಎಂಬ ಉದ್ದೇಶದಿಂದ ಸದರಿ ಅಗ್ರಿಮೆಂಟನ್ನು ನ್ಯಾ ಮುಂದೆ

ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 17.05.2014 ರಂದು ನಗದು 5.20 ಲಕ್ಷ ರೂ. ಹಣವನ್ನು ಆರೋಪಿಗೆ ನೀಡಿರುತ್ತೇನೆಂದು ಹೇಳಿದ್ದು, ಸದರಿ ಹಣ ಕಬ್ಬನ್ನು ಫ್ಯಾಕ್ಟರಿಗೆ ಕಳುಹಿಸಿದ್ದರಿಂದ ಬಂದಿರುತ್ತದೆ. 5.20 ಲಕ್ಷ ರೂ. ಹಣವನ್ನು ಆರೋಪಿಗೆ ನೀಡಿದ್ದೇನೆಂದು ಹೇಳಿದ್ದು ಸದರಿ ಹಣವನ್ನು ಚೆಕ್ ಅಥವಾ ಆನಲೈನ್ ಮುಖಾಂತರ ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಆ ಸಮಯದಲ್ಲಿ ನನ್ನ ಹತ್ತಿರ ಚೆಕ್ ಇರಲಿಲ್ಲ ಕಾರಣ ನಗದು ಹಣ ನೀಡಿರುತ್ತೇನೆ. RTGS ಮೂಲಕ ಸದರಿ ಹಣ ನೀಡಬೇಕಿತ್ತು ಎಂದರೆ ಆರೋಪಿ ನಗದು ಹಣ ಬೇಕು ಎಂದು ಕೇಳಿದ್ದಕ್ಕಾಗಿ ನಗದು ಹಣ ಕೊಟ್ಟಿರುತ್ತೇನೆ. ರೂ. 5.20 ಲಕ್ಷ ಹಣವನ್ನು ನಾನು ಆರೋಪಿಗೆ ಬ್ಯಾಂಕಿನಿಂದ ತಂದು ನೀಡಿರುತ್ತೇನೆ, ಆಗ ಆರೋಪಿ ಮೂಡಲಗಿಗೆ ಬಂದಿದ್ದು ನಾನು ಹಣ ತರುವವರೆಗೂ ಆರೋಪಿ ಮೂಡಲಗಿಯಲ್ಲೇ ಇದ್ದರು. ನಾನು ಆರೋಪಿಗೆ ನೀಡಿದ್ದೇನೆಂದು ಹೇಳಲಾದ ರೂ. 5.20 ಲಕ್ಷ ಹಣ 500 ರೂ. ನ ಮುಖಬೆಲೆಯಲ್ಲಿ ಇದ್ದವು. 5.20 ಲಕ್ಷ ರೂ. 500 ರೂ. ನ ಮುಖಬೆಲೆಯ ನೋಟುಗಳಲ್ಲಿ 6 ಬಂಡಲ್ ಇದ್ದು, ಮೇಲೆ 40 ನೋಟುಗಳು ಇದ್ದವು. ಆ ಸಮಯದಲ್ಲಿ ನನ್ನ ಜೊತೆ ಗಿರಿಮಲ್ಲಪ್ಪ ಪಾಟೀಲ, ಗುರುಪಾದಪ್ಪ ಬೀರಾದಾರ ಮತ್ತು ಶಿವಬಸ್ಸು ನೇಮಗೌಡರ ಹಾಜರಿದ್ದರು, ಆಗ ಸಮಯ ಮಧ್ಯಾಹ್ನ 12 ರಿಂದ 1 ಗಂಟೆ ಆಗಿರಬಹುದು. ಮೇಲೆ ಹೇಳಿದ ವ್ಯಕ್ತಿಗಳನ್ನು ನೀವು ಕರೆದುಕೊಂಡು ಹೋಗಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನೊಬ್ಬನೇ ಹೋಗಿ ಹಣ ತಂದು ಕೊಟ್ಟಿರುತ್ತೇನೆಂದು ಎಂದು ನುಡಿಯುತ್ತಾರೆ. ನಾನು ಹಣ ಕೊಡುವ ಸಮಯದಲ್ಲಿ ಮೇಲೆ ಹೇಳಿರುವ ವ್ಯಕ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ವ್ಯಕ್ತಿಗಳು ನಾನು ಹಣ ತಂದಾಗ ಸ್ಥಳಕ್ಕೆ ಬಂದಿರುತ್ತಾರೆ. ಸದರಿ ವ್ಯಕ್ತಿಗಳನ್ನು ನೀವು ಕರೆದಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ವ್ಯಕ್ತಿಗಳು ಹಣ ಬೇಕು ಎಂದು ಕೇಳಿದ್ದರಿಂದ ನಾನು ಹಣ ತಂದಾಗ ಸದರಿ ಹಣವನ್ನು ತೆಗೆದುಕೊಂಡು ಹೋಗಿರುತ್ತಾರೆಂದು ನುಡಿಯುತ್ತಾರೆ.

ದಿಃ 02.07.2014 ರಂದು ನಾನು ಆರೋಪಿಗೆ 1.3 ಲಕ್ಷ ರೂ. ಹಣ ನೀಡಿದ್ದೇನೆಂದು ಹೇಳಿದ್ದು ಸದರಿ ಹಣವನ್ನು ನಾನು ಆರೋಪಿಗೆ ಮೂಡಲಗಿಯಲ್ಲಿ ನೀಡಿರುತ್ತೇನೆ. ಸದರಿ ಹಣ 500 ರೂ. ಮುಖಬೆಲೆಯ 2 ಬಂಡಲ್ ಮತ್ತು 60 ನೋಟುಗಳ 500 ರೂ. ಮುಖಬೆಲೆಯಲ್ಲಿತ್ತು. ಹಾಗೇ ಹಣ ನೀಡಿದ ಸಮಯದಲ್ಲಿ ನನ್ನ ಜೊತೆ ಗಿರಿಮಲ್ಲಪ್ಪ ಪಾಟೀಲ, ಗುರುಪಾದಪ್ಪ ಬೀರಾದಾರ ಮತ್ತು ಶಿವಬಸ್ಸು ನೇಮಗೌಡರ ಹಾಜರಿದ್ದರು. ಸದರಿ ವ್ಯಕ್ತಿಗಳಲ್ಲಿ ಆರೋಪಿಯ ಜೊತೆ ಗುರುಪಾದಪ್ಪ ಬೀರಾದಾರ ಬಂದಿದ್ದು, ಗಿರಿಮಲ್ಲಪ್ಪ ಪಾಟೀಲ ಮತ್ತು ಶಿವಬಸ್ಸು ನೇಮಗೌಡರ ಮೂಡಲಗಿಯಲ್ಲಿ ಇದ್ದರು. ಶಿವಬಸ್ಸು ನೇಮಗೌಡರ

ದೂರದಿಂದ ನನಗೆ ಸೋದರ ಸಂಬಂಧಿ ಆಗಿತ್ತು, ಗಿರಿಮಲ್ಲಪ್ಪ ಪಾಟೀಲ ನನ್ನ ದೂರದ ಸಂಬಂಧಿ ಆಗಿದ್ದು ಮತ್ತು ಗುರುಪಾದಪ್ಪ ಬೀರಾದಾರ ಈತನು ಗಿರಿಮಲ್ಲಪ್ಪ ಪಾಟೀಲನ ಸಂಬಂಧಿ ಆಗಿರುತ್ತಾನೆ.

ಆರೋಪಿಗೆ ಮೇಲೆ ಹೇಳಿದ ಎರಡೂ ದಿನಾಂಕಗಳಲ್ಲಿ ಹಣ ನೀಡಿದ್ದೇನೆಂದು ಹೇಳಿದ್ದು ಆ ಸಮಯದಲ್ಲಿ ಆರೋಪಿಯಿಂದ ನಾನು ಹಣ ಸಂದಾಯ ರಶೀದಿ ಪಡೆದುಕೊಂಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಆರೋಪಿಗೆ ಯಾವುದೇ ನಗದು ಹಣ ನೀಡಿರುವುದಿಲ್ಲ, ನ್ಯಾ. ದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಿಸಿ ನಂ. 220/2020 ರಲ್ಲಿ ನಿಶಾನೆಗೊಳಿಸಿದ ನಿಪಿ- 12 ರ ಮೇಲೆ ಸಾಕ್ಷಿಗಳಾಗಿ 1. ಗುರುಪಾದಪ್ಪ ಬೀರಾದಾರ, 2. ಗಿರಿಮಲ್ಲಪ್ಪ ಪಾಟೀಲ ಮತ್ತು 3. ಶಿವಬಸ್ಸು ನೇಮಗೌಡರ ಸಹಿ ಮಾಡಿರುತ್ತಾರೆ. ಮೇಲೆ ಹೇಳಿದ 3 ಜನರು ನಿಪಿ- 12 ರ ಮೇಲೆ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ನಿಪಿ- 12 ರಲ್ಲಿ ಮೇಲೆ ಹೇಳಿದ 3 ಜನರು ಮೂಡಲಗಿಯಲ್ಲಿ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ಸದರಿಯವರನ್ನು ಸಾಕ್ಷಿಗಳಾಗಿ ಸಹಿ ಮಾಡುವಂತೆ ನಾನೇ ಕೇಳಿಕೊಂಡಿರುತ್ತೇನೆ. ನಿಪಿ- 12 ನ್ನು ಆರೋಪಿಯೇ ಗಣಕೀಕರಿಸಿ ನನಗೆ ನೀಡಿರುತ್ತಾನೆ. ನಿಪಿ- 12 ಮತ್ತು ಅದರ ಜೊತೆ ಇನ್ನುಳಿದ 4 ಲೇಟರ ಹೆಡ್‌ಗಳನ್ನು ಆರೋಪಿ ಅಗ್ರಿಮೆಂಟ ಸಮಯದಲ್ಲಿ ಭದ್ರತೆಗಾಗಿ ನನಗೆ ನೀಡಿರುತ್ತಾನೆಂದರೆ ಸರಿಯಲ್ಲ. ಸದರಿ ಖಾಲಿ ಲೇಟರ ಹೆಡ್‌ಗಳನ್ನು ನಾನು ದುರುಪಯೋಗಪಡಿಸಿಕೊಂಡು ಗಣಕೀಕರಿಸಿ ಪ್ರಸ್ತುತ ಪ್ರಕರಣಕ್ಕಾಗಿ ನ್ಯಾ. ಮುಂದೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ 15 ಲಕ್ಷ ರೂ.ಗಳಿಗೆ ಅಗ್ರಿಮೆಂಟ ಆಗಿದ್ದು, ಅದರಲ್ಲಿ ನಾನು ಕೇವಲ 2.10 ಲಕ್ಷ ರೂ.ಗಳನ್ನು ಆರೋಪಿಗೆ ನೀಡಿರುತ್ತೇನೆಂದರೆ ಸರಿಯಲ್ಲ, ಒಟ್ಟು 21 ಲಕ್ಷ ರೂ.ಗಳಿಗೆ ಅಗ್ರಿಮೆಂಟ ಆಗಿರುತ್ತದೆ. ನನ್ನ ಮತ್ತು ಆರೋಪಿಯ ನಡುವೆ ಆದ ಅಗ್ರಿಮೆಂಟ ನಲ್ಲಿ 21 ಲಕ್ಷ ರೂ.ಗಳಿಗೆ ಆಗಿರುತ್ತದೆ. ಸದರಿ ಅಗ್ರಿಮೆಂಟನ್ನು ನ್ಯಾ ಕ್ಕೆ ಹಾಜರುಪಡಿಸುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಅಗ್ರಿಮೆಂಟ ನನ್ನ ಮತ್ತು ಆರೋಪಿಯ ನಡುವೆ ರದ್ದಾಗಿರುತ್ತದೆ. ರದ್ದಾಗಿರುವ ಅಗ್ರಿಮೆಂಟನ್ನು ನ್ಯಾ. ಕ್ಕೆ ಹಾಜರುಪಡಿಸುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಹತ್ತಿರ ಇದ್ದರೆ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ಸದರಿ ಅಗ್ರಿಮೆಂಟ ನನ್ನ ಹತ್ತಿರ ಇದ್ದು ಉದ್ದೇಶಪೂರ್ವಕವಾಗಿ ನ್ಯಾ. ಕ್ಕೆ ಹಾಜರುಪಡಿಸುತ್ತಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಅಗ್ರಿಮೆಂಟನ್ನು ಹರಿದು ಹಾಕಿರುತ್ತೇನೆಂದು ನುಡಿಯುತ್ತಾರೆ.

ನನ್ನ ದೂರಿನಲ್ಲಿ ಆರ್ಯ ಮೌರ್ಯ ಸಂಸ್ಥೆಯಿಂದ ಆರೋಪಿ ಹಣ ಪಡೆದುಕೊಂಡಿದ್ದಾನೆಂದು ಹೇಳಿದ್ದು ಅದಕ್ಕೆ ಸಂಬಂಧಿದ ದಾಖಲಾತಿಗಳನ್ನು ನ್ಯಾ. ಹಾಜರುಪಡಿಸಿದ್ದೀರಾ ಎಂದರೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಆರ್ಯ ಮೌರ್ಯ ಸಂಸ್ಥೆಯವರು ನನಗೆ ಮೊದಲಿನಿಂದಲೂ ಪರಿಚಯ \

ಇರುವುದಿಲ್ಲ, ಆರೋಪಿಯಿಂದ ಪರಿಚಯ ಆಗಿರುತ್ತಾರೆ. ನನ್ನ ಮತ್ತು ಆರ್ಯ ಮೌರ್ಯ ಸಂಸ್ಥೆಯ ನಡುವೆ ವ್ಯವಹಾರ ಆಗಿದ್ದು, ನನ್ನ ಮತ್ತು ಆರೋಪಿಯ ನಡುವೆ ವ್ಯವಹಾರ ಆಗಿದೆ ಎಂದು ಪ್ರಸ್ತುತ ಪ್ರಕರಣ ದಾಖಲಿಸಿರುತ್ತೇನೆಂದರೆ ಆರೋಪಿ ಹಣ ಕೊಡು ಎಂದು ಹೇಳಿದ್ದಕ್ಕಾಗಿ ಆರ್ಯ ಮೌರ್ಯ ಸಂಸ್ಥೆಯ ಅಕೌಂಟಗೆ ನಾನು ಹಣ ಸಂದಾಯ ಮಾಡಿರುತ್ತೇನೆ. ಆರೋಪಿ ಹಣ ಕೊಡು ಎಂದು ಹೇಳಿದ್ದಕ್ಕಾಗಿ ಆರ್ಯ ಮೌರ್ಯ ಸಂಸ್ಥೆಯ ಅಕೌಂಟಗೆ ನಾನು ಹಣ ಸಂದಾಯ ಮಾಡಿರುತ್ತೇನೆಂದು ಹೇಳಿದ್ದು ಅದಕ್ಕೆ ಸಂಬಂಧಿದ ದಾಖಲಾತಿಗಳನ್ನು ನ್ಯಾ. ಕ್ಕೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನನಗೆ ಆರ್ಯ ಮೌರ್ಯ ಸಂಸ್ಥೆಯವರಿಗೆ ಹಣ ಕೊಡು ಎಂದು ಹೇಳಿರುವುದಿಲಲ ನನ್ನ ವೈಯಕ್ತಿಕ ವ್ಯವಹಾರವನ್ನು ಉಪಯೋಗಿಸಿಕೊಂಡು ಆರೋಪಿಯ ವಿರುದ್ಧ ಪ್ರಸ್ತುತ ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನನ್ನ ಅಕೌಂಟನಿಂದ ಆರೋಪಿಯ ಅಕೌಂಟಗೆ ಒಟ್ಟು 2.10 ಲಕ್ಷ ರೂ. ಹಣ ಕೊಟ್ಟಿದ್ದು ಅದನ್ನು 1.60 ಲಕ್ಷ ಒಂದು ಸಲ ಇನ್ನೊಂದು ಸಲ 50 ಸಾವಿರ ರೂ. ಹಣ ಕೊಟ್ಟಿರುತ್ತೇನೆ. ಪ್ರಸ್ತುತ ಪ್ರಕರಣದಲ್ಲಿ ಹೇಳಿರುವ ವ್ಯವಹಾರ ಸಿನಿಮಾಗೆ ಸಂಬಂಧಪಟ್ಟ ವ್ಯವಹಾರ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಹೇಳಿರುವ ವ್ಯವಹಾರ ಸಾಲದ ವ್ಯವಹಾರ ಅಲ್ಲ ಎಂದರೆ ಸರಿ. ನಾನು ಮತ್ತು ನನ್ನ ಪರ ಸಾಕ್ಷಿಗಳು ಸೇರಿಕೊಂಡು ಆರೋಪಿಯ ವಿರುದ್ಧ ಸುಳ್ಳು ದೂರು ದಾಖಲಿಸಿ ಆತನಿಗೆ ಹಿಂಸೆ ಕೊಡುವ ಮತ್ತು ಆತನಿಂದ ಹಣ ವಸೂಲಿ ಮಾಡುವ ಉದ್ದೇಶದಿಂದ ಪ್ರಸ್ತುತ ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.